ಪಡಿತರ ಚೀಟಿ

1043 (1108) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡುಬಡವರು ನೆಮ್ಮದಿ ಕೇಂದ್ರದ ಮುಂದೆ ಹೋಗಲು ಸಾಧ್ಯವಾಗದೆ ಪಡಿತರ ಚೀಟಿ ಪಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಡುಬಡವರಾಗಿದ್ದರೂ ಕೆಲವರಿಗೆ ಪಡಿತರ ಚೀಟಿಯನ್ನು ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಮಾಹಿತಿ ನೀಡುವುದು);

ಇ) ಕಡುಬಡವರಿಗೆ ಪಡಿತರ ಚೀಟಿಯನ್ನು ಸಮರ್ಪಕವಾಗಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಈ ಹಿಂದೆ ಜಿ–8 ಮತ್ತು ಜಿ–9 ಅಡಿಯಲ್ಲಿ ಪಡಿತರ ಚೀಟಿ ಪಡೆಯಲು ಅವಕಾಶ ನೀಡಲಾಗಿತ್ತು. ಇದರಲ್ಲಿ ಜಿ–8 ಅಡಿಯಲ್ಲಿ : 7,40,877 ಮತ್ತು ಜಿ–9 ಅಡಿಯಲ್ಲಿ : 12,71,685 ಪಡಿತರ ಚೀಟಿಗಳನ್ನು ನೀಡಲಾಗಿದೆ. ತದನಂತರ ಹೋಬಳಿ ಮಟ್ಟದ ನೆಮ್ಮದಿ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಅರ್ಜಿ ನೀಡಿ ಪಡಿತರ ಚೀಟಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿತ್ತು. ಪ್ರಸ್ತುತ, ನೆಮ್ಮದಿ ಕೇಂದ್ರಗಳ ಮೂಲಕ ವಿತರಿಸಿರುವ 23,19,975 ಬಿಪಿಎಲ್ ಪಡಿತರ ಚೀಟಿಗಳು ಚಾಲನೆಯಲ್ಲಿರುತ್ತವೆ. ಒಟ್ಟು 98,44,334 ಪಡಿತರ ಚೀಟಿಗಳಿಗೆ ಹಂಚಿಕೆಯನ್ನು ನೀಡಲಾಗುತ್ತಿದೆ. ಕೇಂದ್ರ ಸರ್ಕಾರ ಕೇವಲ 31.29 ಲಕ್ಷ ಕುಟುಂಬಗಳಿಗೆ ಬಿಪಿಎಲ್ ಎಂದು ಪರಿಗಣಿಸಿ, ಬಿಪಿಎಲ್ ಅಡಿಯಲ್ಲಿ ಆಹಾರ ಧಾನ್ಯ ಬಿಡುಗಡೆ ಮಾಡಲಾಗುತ್ತಿದೆ. ಖಾಯಂ ಗಣಕೀಕೃತ ಪಡಿತರ ಚೀಟಿ ನೀಡುವ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಮುಕ್ತಾಯಗೊಳಿಸಲಾಗುವುದು ಬಿಟ್ಟು ಹೋಗಿರುವ ಕುಟುಂಬಗಳು ತಾಲ್ಲೂಕು

ಮಟ್ಟದ ಬ್ಯಾಕ್ ಆಫೀಸುಗಳಲ್ಲಿ ಪಡಿತರ ಚೀಟಿಯ ಕುಂದು ಕೊರತೆ ಬಗ್ಗೆ ಪರಿಹಾರ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಸೂರ್ಯಕಾಂತಿ ಬಿತ್ತನೆ ಬೀಜ

(1269) 1044 ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೂರ್ಯಕಾಂತಿ ಬಿತ್ತನೆ ಬೀಜಗಳನ್ನು ಉತ್ಪಾದಿಸಲು ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಸಂಸ್ಥೆಗಳ ಸಂಖ್ಯೆ ಎಷ್ಟು;

ಆ) ಪ್ರತಿಯೊಂದು ಸಂಸ್ಥೆಗಳು ಉತ್ಪಾದಿಸುವ ಸೂರ್ಯಕಾಂತಿ ಬೀಜಗಳಿಗೆ ನಿಗದಿಪಡಿಸಿರುವ ದರವೆಷ್ಟು;

ಇ) ಈ ಸಂಸ್ಥೆಗಳು ಸೂರ್ಯಕಾಂತಿ ಬೀಜ ಉತ್ಪಾದನೆಗೆ ಸರ್ಕಾರದಿಂದ ಪಡೆಯುವ ಸಹಾಯ ಧನವೆಷ್ಟು;

ಈ) ಸೂರ್ಯಕಾಂತಿ ಬೀಜ ಉತ್ಪಾದಿಸಲು ಉತ್ಪಾದನಾ ಫಲಾನುಭವಿಗೆ ಖಾಸಗಿ ಸಂಸ್ಥೆಯವರು ನೀಡುವ ದರವೆಷ್ಟು?

ಶ್ರೀ ಎಸ್. ಎ. ರವಿಂದ್ರನಾಥ್ (ಕೃಷಿ ಸಚಿವರು) :

ಅ) ಧೃಡೀಕೃತ ಸೂರ್ಯಕಾಂತಿ ಬಿತ್ತನೆ ಬೀಜಗಳನ್ನು ಉತ್ಪಾದಿಸುವ ಖಾಸಗಿ ಸಂಸ್ಥೆಗಳು, ತಮ್ಮ ಹೆಸರನ್ನು ಕರ್ನಾಟಕ ರಾಜ್ಯ ಬೀಜ ಪ್ರಮಾಣ ಸಂಸ್ಥೆಯಲ್ಲಿ ನೊಂದಾಯಿಸಿಕೊಳ್ಳಬೇಕಾಗಿರುತ್ತದೆ. 2009–10 ನೇ ಸಾಲಿನಲ್ಲಿ, ಇಲಾಖಾ ಕಾರ್ಯಾಕ್ರಮಗಳಿಗೆ ರಿಯಾಯಿತಿ ದರದಲ್ಲಿ ಬೀಜ ಸರಬರಾಜು ಮಾಡಲು ಒಟ್ಟು 30 ಖಾಸಗಿ ಸಂಸ್ಥೆಗಳು ಮಾನ್ಯತೆ ಪಡೆದಿರುತ್ತವೆ.

ಆ) 2009–10 ನೇ ಸಾಲಿನಲ್ಲಿ ರಿಯಾಯಿತಿ ದರದಲ್ಲಿ ಬೀಜ ವಿತರಿಸಲು ಖಾಸಗಿ ಸಂಸ್ಥೆಗಳ ಸೂರ್ಯಕಾಂತಿ ಬಿತ್ತನೆ ಬೀಜಕ್ಕೆ ನಿಗಧಿ ಪಡಿಸಿರುವ ಮಾರಾಟ ದರದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. ಸದರಿ ಬಿತ್ತನೆ ಬೀಜಕ್ಕೆ 2009ರ ಮುಂಗಾರು ಹಂಗಾಮಿನಲ್ಲಿ ಶೇಕಡ 50ರ ರಿಯಾಯಿತಿ ಅಥವಾ ಗರಿಷ್ಠ ಪ್ರತಿ ಕೆ.ಜಿ. ಗೆ ರೂ.120.00 ಮತ್ತು ಹಿಂಗಾರು ಹಂಗಾಮಿನಲ್ಲಿ ಬರ/ಪ್ರವಾಹ ಪೀಡಿತ ತಾಲ್ಲೂಕುಗಳಲ್ಲಿ ಶೇ. 75 ರ ರಿಯಾಯಿತಿ ಅಥವ ಗರಿಷ್ಠ ಪ್ರತಿ ಕೆ.ಜಿ. ಗೆ ರೂ. 145.00 ರಂತೆ ಸರಬರಾಜು ಮಾಡಲಾಗಿರುತ್ತದೆ (ಇತರೆ ತಾಲ್ಲೂಕುಗಳಲ್ಲಿ 2009ರ ಮುಂಗಾರು ಹಂಗಾಮಿನ ರಿಯಾಯಿತಿಯಂತೆ).